# ಶರಣು ಸಿದ್ಧಿವಿನಾಯಕ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchhu Rayaru, page No. 14.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 03.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 107.
4. **Note:** The lyrics mentioned without highlights are as per Ref. 2. The wordings given in yellow highlights are as per Ref. 1. The wordings in Ref. 3 are almost similar to Ref. 2.
5. **Note:** Singer has followed the lyrics as in Ref. 2.
6. **Note:** The Ankita is different in above references. We have considered Ref.1 as standard and taken that Ankita for listing.
7. **Note:** As per the foot notes in Ref. 1 many wordings which are used in Ref. 2 may be considered here. Hence, lyrics in Ref. 2 may be followed fully.

ರಾಗ: ಸುರುಟಿ ತಾಳ: ತ್ರಿವಿಡಿ

| | |
|---|---|
| ಶರಣು ಸಿದ್ಧಿ ವಿನಾಯಕ | ಶರಣು ಶರಣು ವಿನಾಯಕ |
| ಶರಣು ವಿದ್ಯ ಪ್ರದಾಯಕ ॥ ಪ ॥ | ಶರಣು ವಿದ್ಯ ಪ್ರದಾಯಕ |
| | |
| ಶರಣು ಪಾರ್ವತಿ ತನಯ ಮೂರುತಿ | ಶರಣು ಪಾರ್ವತಿ ತನಯ ಮೂರುತಿ |
| ಶರಣು ಮೂಷಕ ವಾಹನ ॥ ಅಪ ॥ | ಶರಣು ಮೂಷಕ ವಾಹನ |
| | |
| ನಿಟಿಲ ನೇತ್ರನ ದೇವಿ ಸುತನೇ | ನಿಟಿಲ ನೇತ್ರನ ವರದ ಸುತನೆ |
| ನಾಗಭೂಷಣ ಪ್ರಿಯನೇ | ನಾಗ ಯಜ್ಞೋಪವೀತನೇ |
| ತಟಿಲ್ಲ ತಾಂಕಿತ ಕೋಮಲಾಂಗನೆ | ಕಟಿಯ ಸೂತ್ರದ ಕೋಮಲಾಂಗನೆ |
| ಕರ್ಣ ಕುಂಡಲ ಧಾರನೆ ॥ 1 ॥ | ಕರ್ಣ ಕುಂಡಲ ಧಾರನೆ |
| | |
| ಬಟ್ಟ ಮುತ್ತಿನ ಪದಕ ಹಾರನೆ | ಬಟ್ಟ ಮುತ್ತಿನ ಪದಕ ಹಾರನೆ |
| ಬಾಹು ಹಸ್ತ ಚತುಷ್ಟನೆ | ದಿವ್ಯ ಬಾಹು ಚತುಷ್ಟನೆ |
| ಇಟ್ಟ ತೊಡುಗೆಯ ಹೇಮ ಕಂಕಣ | ಇಟ್ಟ ತುಡುಗೆಯ ಹೇಮ ಕಂಕಣ |
| ಪಾಶ ಅಂಕುಶಧಾರನೆ ॥ 2 ॥ | ಪಾಶ ಅಂಕುಶಧಾರನೆ |
| | |
| ಕುಕ್ಷಿ ಮಹಾ ಲಂಬೋದರನೆ | ಕುಕ್ಷಿ ಮಹ ಲಂಬೋದರನೆ |

| | |
|---|---|
| ಇಕ್ಷುಚಾಪನ ಗೆಲಿದನೆ | ಇಕ್ಷುಚಾಪನ ಗೆಲಿದನೆ |
| ಪಕ್ಷಿ ವಾಹನ ಸಿರಿ ಪುರಂದರ | ಪಕ್ಷಿ ವಾಹನನಾದ ಪುರಂದರ |
| ವಿಠಲನ ನಿಜ ದಾಸನೆ ॥ 3 ॥ | ವಿಠಲನ ನಿಜ ದಾಸನೆ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ನಿಟಿಲ ನೇತ್ರನ ದೇವಿ** – ಹಣೆಗಣ್ಣಿನವನ, ಎಂದರೆ ಶಿವನ, ಹೆಂಡತಿಯಾದ ಪಾರ್ವತಿ.

**ನಾಗಭೂಷಣಪ್ರಿಯ** – ಹಾವನ್ನು ಆಭರಣವಾಗಿ ಉಳ್ಳ ಶಿವನಿಗೆ ಪ್ರಿಯನಾದವನು; ಅವನ ಗಣಗಳ ಒಡೆಯನಾಗಿ.

**ಕಟಿ** = ನಡು

**ಕಟಿಕಟಾಂಗದ** – 'ಕಟಿ' ನಡುವು, 'ಕಟಾಂಗ' (ಕಟಾಹ ಎನ್ನುವುದರ ಅಪಭ್ರಂಶ), ಬೆಟ್ಟ; ದೊಡ್ಡಪಾತ್ರೆ, ಕಡಾಯಿ; ಎಂದರೆ ಬೆಟ್ಟದಂಥ ಹೊಟ್ಟೆಯುಳ್ಳವನು.

**ತಟಿಲ್ಲತೆ** = ಬಳ್ಳಿ ಮಿಂಚು, ಕೊಲ್ಮಿಂಚು

ತಟಿಲತಾಂಕಿತ (ತಟಿಲ + ತಾಂಕಿತ) ಎಂಬುದು ಸಂಸ್ಕೃತಸಮಾಸದ ಪದ.

ಪದಭೇದವಾಗಿ ನೋಡಿದರೆ:

ತಟಿಲ (ತಡಿತ್ / ತಟಿತ್) → ಮಿಂಚು, ವಿದ್ಯುತ್‌ರೇಖೆ, ಮಿಂಚಿನ ಕಾಂತಿ

ತಾಂಕಿತ → ಅಲಂಕರಿಸಲ್ಪಟ್ಟ, ಗುರುತಿಸಲ್ಪಟ್ಟ, ಅಂಕಿತಗೊಂಡ

ಒಟ್ಟಾರೆ ಅರ್ಥ

ತಟಿಲತಾಂಕಿತ ಎಂದರೆ ಮಿಂಚಿನಂತೆ ಪ್ರಕಾಶಿಸುವ ಅಲಂಕಾರದಿಂದ ಅಲಂಕರಿಸಲ್ಪಟ್ಟ

ಅಥವಾ ಮಿಂಚಿನ ಕಾಂತಿಯ ಗುರುತುಳ್ಳ.

ಈ ಪದ್ಯದ ಸಂದರ್ಭದಲ್ಲಿ

"ತಟಿಲತಾಂಕಿತ ಕೋಮಲಾಂಗನೆ" -- ಇಲ್ಲಿ ಗಣೇಶನನ್ನು ವರ್ಣಿಸುವಾಗ, ಅವನ ಕೋಮಲ ಅಂಗಗಳು ಮಿಂಚಿನಂತೆ ಹೊಳೆಯುವ ಕಾಂತಿಯಿಂದ (ಆತನ ಮೃದುವಾದ ದೇಹದ ಅಂಗಗಳು ಮಿಂಚಿನಂತಹ ಹೊಳಪಿನಿಂದ ತುಂಬಿವೆ) ಅಲಂಕರಿಸಲ್ಪಟ್ಟಿವೆ ಎಂಬ ಅರ್ಥ ಬರುತ್ತದೆ.

ಭಕ್ತಿ ಕಾವ್ಯದಲ್ಲಿ "ಮಿಂಚು" ಎಂಬುದು ಸಾಮಾನ್ಯವಾಗಿ ದಿವ್ಯ ಕಾಂತಿ, ಅಪ್ರಾಕೃತ ಸೌಂದರ್ಯ, ದೇವತ್ವದ ಪ್ರಕಾಶ. ಇವನ್ನೆಲ್ಲ ಸೂಚಿಸಲು ಬಳಸಲ್ಪಡುತ್ತದೆ.

ಹೀಗಾಗಿ ತಟಿಲತಾಂಕಿತ = ದಿವ್ಯ ಮಿಂಚಿನಂತ ಪ್ರಕಾಶದಿಂದ ಅಲಂಕರಿತ

**ಸೂತ್ರ** = ಉಡುದಾರ

**ಬಟುವ** – ಗುಂಡಗಿರುವ.

**ಬಟ್ಟ** = ದುಂಡಗಾದ

**ತುಡುಗೆ** = ಆಭರಣ

**ಹಸ್ತಚತುಷ್ಟನೆ** – ಹಸ್ತಚತುಷ್ಟಯನೇ, ನಾಲ್ಕು ಕೈಗಳುಳ್ಳವನೇ.

**ಅಂಕುಶಧಾರನೆ–** ಅಂಕುಶಧರನೇ.

**ಕುಕ್ಷಿಮಹಾ ಲಂಬೋಧರನೆ** – ದೊಡ್ಡ ಹೊಟ್ಟೆಯವನೇ.

**ಇಕ್ಷುಚಾಪನ ಗೆಲಿದನೆ–** ಕಬ್ಬನ್ನು ಬಿಲ್ಲಾಗಿ ಉಳ್ಳ ಮನ್ಮಥನನ್ನು ಚೆಲುವಿನಲ್ಲಿ ಗೆದ್ದವನೆ.

**ಪಕ್ಷಿವಾಹನ** – ಗರುಡನನ್ನೇರಿ ಬರುವವ, ವಿಷ್ಣು

**Classification:** Keerthane
**Ankita:** Purandara Vittala
**Location:** NA
**Category:** Ganesha Stuti, Pooja Tatva
**Sub-Category:** ganesha, Parvati, ili, pakshi, bangara, kivi, divya, kai, vidya, muttu, hAra, abharana,
**Pravachana:** NA
**Explanation:** Dr. Vijayendra Desai, Dharwad